## 2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ.

## ಎಸ್.ಸಿ ನಂ:- 167/19

ಪಿ ಡಬ್ಲ್ಯೂ: 14

ಸಿ ಡಬ್ಲ್ಯೂ: 15

| | | |
|---|---|---|
| ಸಾಕ್ಷಿದಾರರ ಹೆಸರು | :: | ದೇವರಾಜ |
| ತಂದೆ ಹೆಸರು | :: | ಜವರಯ್ಯ |
| ವಯಸ್ಸು | :: | 38 ವರ್ಷ |
| ವೃತ್ತಿ | :: | ಆಟೋ ಚಾಲಕ |
| ವಾಸ | :: | ಲಕ್ಷ್ಮೀಪುರ |

ದಿನಾಂಕ 24-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಸರ್ಕಾರಿ ಅಭಿಯೋಜಕರಿಂದ:-

ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿಗಳು ನನಗೆ ಗೊತ್ತು. ಈಗ ತೋರಿಸಿದ ನಿಪಿ 1 ರಲ್ಲಿ ನನ್ನ ಸಹಿ ಇದೆ, ಸಾಕ್ಷಿಯ ಸಹಿಯನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಹೊಳೆನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಆರೋಪಿಗಳ ಮನೆಯ ಬಳಿ ಪೊಲೀಸರು ಬಂದಿದ್ದರು. ಆಗ ನಾನು ನೋಡುತ್ತಾ ನಿಂತಿದ್ದೆ. ಅಂದಾಜು 3 ವರ್ಷಗಳ ಹಿಂದೆ ಆ ರೀತಿ ಸಹಿ ಮಾಡಿದ್ದೇನೆ. ಆರೋಪಿಗಳ ಮನೆಯ ಬಳಿ ಪೊಲೀಸರು ಯಾವ ಕಾರಣಕ್ಕಾಗಿ ಬಂದಿದ್ದರು ಎಂದು ನನಗೆ ಗೊತ್ತಿಲ್ಲ.

ಪೊಲೀಸರು ನನ್ನ ಸಮಕ್ಷಮ ಯಾವುದೇ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಂಡಿಲ್ಲ. ಆರೋಪಿಗಳ ಮನೆಯ ಬಳಿ ಪೊಲೀಸರು ಬಂದು ನಿಂತಿದ್ದರು ಅಲ್ಲಿ ಏನು ಕ್ರಮ ಜರುಗಿಸಿದ್ದಾರೆಂದು ನನಗೆ ಗೊತ್ತಿಲ್ಲ ಅಲ್ಲಿ ಅವರು ಕೇವಲ ನಿಂತುಕೊಂಡಿದ್ದರು ಅಷ್ಟೇ. ಆ ರೀತಿ ಪೊಲೀಸರು ಬಂದಾಗ ಬೆಳಗ್ಗೆ 10 ಗಂಟೆ ಆಗಿತ್ತು.

(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ:-

ದಿ: 3-1-18 ರಂದು ಪೊಲೀಸರು ಆರೋಪಿಗಳ ಮನೆಯ ಬಳಿ ಬಂದಿದ್ದರು ಎಂಬುದು ಸರಿ. 2 ನೇ ಆರೋಪಿಯ ಹೆಂಡತಿಯು ಆ ಮನೆಯಲ್ಲಿ ಬೆಂಕಿಯನ್ನು ಹಚ್ಚಿಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದ ಜಾಗ

ಪರಿಶೀಲನೆಗಾಗಿ ಪೊಲೀಸರು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಸೀಮೆಎಣ್ಣೆ ಕ್ಯಾನನ್ನು ಸ್ವಾಧೀನ ಪಡಿಸಿಕೊಂಡರು ಎಂದರೆ ಸರಿಯಲ್ಲ.

ಒಂದು ಕಂದು ಬಣ್ಣದ ಸೀಮೆಎಣ್ಣೆ ಕ್ಯಾನ್ ಇದ್ದು, ಆ ಕ್ಯಾನ್ ನಲ್ಲಿದ್ದ ಸೀಮೆ ಎಣ್ಣೆಯನ್ನು ಸುರಿದು ಕೊಂಡು 2 ನೇ  ಆರೋಪಿ ಹೆಂಡತಿ ಬೆಂಕಿ ಹಚ್ಚಿಕೊಂಡಿದ್ದ ವಿಚಾರದಲ್ಲಿ ಪೊಲೀಸರು ಆ ಪ್ಲಾಸ್ಟಿಕ್ ಕ್ಯಾನನ್ನು ನನ್ನ ಸಮಕ್ಷಮ ಸ್ವಾಧೀನ ಪಡಿಸಿಕೊಂಡರು ಎಂದರೆ ಸರಿಯಲ್ಲ. ಸೀಮೆ ಎಣ್ಣೆ ಕ್ಯಾನನ್ನು ಪೊಲೀಸರು ಒಂದು ಬಿಳಿ ಬಟ್ಟೆಯನ್ನು ಸುತ್ತಿ ಸೀಲ್ ಮಡಿ ನನ್ನ ಸಮಕ್ಷಮ ಸ್ವಾಧೀನ ಪಡಿಸಿಕೊಂಡು ನಿಪಿ 1 ರಂತೆ ಮಹಜರ್ ಬರೆದು ಸ್ಥಳದಲ್ಲೇ ನನ್ನ ಸಹಿ ಪಡೆದುಕೊಂಡಿದ್ದಾರೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಆ ದಿನ ಪೋಲೀಸರು ಬಂದಿದ್ದರು ಠಾಣೆಗೆ ಬಂದು ಸಹಿ ಮಾಡಲು ತಿಳಿಸಿರುತ್ತಾರೆಂದು ಸಾಕ್ಷಿಯು ನುಡಿಯುತ್ತಾರೆ.

ಅರೆ ಬೆಂದಿರುವ ಒಂದು ಮೆರೂನ್ ಬಣ್ಣದ ನೈಟಿ ಮತ್ತು ಒಂದು ಬೆಂಕಿ ಪೊಟ್ಟಣ ಬಿದ್ದಿದ್ದು ಅವುಗಳನ್ನು ಪೊಲೀಸರು ನನ್ನ ಸಮಕ್ಷಮ ಸ್ವಾಧೀನ ಪಡಿಸಿಕೊಂಡರು ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿಗಳ ಪರ ಶ್ರೀ ಎಂ ಎಸ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.**

*(ಸಾಕ್ಷಿಯ ಸಾಕ್ಷವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು.)*

*ಓ.ಹೇ.ಕೇ. ಸರಿ ಇದೆ.*

*2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್*
*ನ್ಯಾಯಾಧೀಶರು, ಹಾಸನ.*